ಬೆಳಗಾವಿ ನಗರ ಸಭೆ ಅಂಗೀಕರಿಸಿದ ನಿರ್ಣಯ

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೇ, ನಾನು ಗಮನ ಸೆಳೆಯುವುದಕ್ಕೆ ಮುಂಚೆ ಬೆಳಗಾವಿ ನಗರ ಸಭೆಯು ಅಂಗೀಕರಿಸಿದ ನಿರ್ಣಯದ ಬಗ್ಗೆ ನಿನ್ನೆ ಮಾತನಾಡಿದ್ದೆವು. ಮಾನ್ಯ ಮುಖ್ಯ ಮಂತ್ರಿಗಳು ಇದ್ದಾರೆ. ನಿರ್ಣಯವನ್ನು ತರಿಸಿದ್ದಾರೆಯೆ ನೋಡಿದ್ದಾರೆಯೆ ಎನ್ನುವುದನ್ನು ತಿಳಿಸಬೇಕು.

ಉಪಾಧ್ಯಕ್ಷರು.— ಈಗ ಮೊದಲು ಗಮನ ಸೆಳೆಯುವ ಸೂಚನೆ ಬಗ್ಗೆ ತಾವು ಹೇಳಿ, ಅದನ್ನು ಆಮೇಲೆ ನೋಡೋಣ.

ಗಮನ ಸೆಳೆಯುವ ಸೂಚನೆ

ನಂಜನಗೂಡಿನ ಹತ್ತಿರವಿರುವ ಕೊಳವೆ ಬಾವಿಗಳಿಂದ ನೀರಿನ ಮಾಲಿನ್ಯದ ಬಗ್ಗೆ

ಶ್ರೀ ವಾಟಾಳ್ ನಾಗರಾಜ್.— ಮಾನ್ಯ ಅಧ್ಯಕ್ಷರೆ, ನಂಜನಗೂಡಿನ ಹತ್ತಿರ ಕೊಳವೆ ಬಾವಿಗಳಿಂದ ರಮ್‌ನಂತಹ ಮದ್ಯಸಾರ ಸೇರಿರುವ ಕಂದುಬಣ್ಣದ ನೀರು ಬರುತ್ತಿದ್ದು, ಇದರಿಂದ ಜನರಿಗೆ, ಪ್ರಾಣಿಗಳಿಗೆ ಮತ್ತು ಬೆಳೆಗಳಿಗೆ ತೊಂದರೆಯಾಗಿರುವ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

† ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).— ಮಾನ್ಯ ಅಧ್ಯಕ್ಷರೆ, ತಮ್ಮ ಅಪ್ಪಣೆಯನ್ನು ಪಡೆದು ಈ ಹೇಳಿಕೆಯನ್ನು ನೀಡುತ್ತೇನೆ.

ಮೆ. ಜಿವಿಂನಿ ಡಿಸ್ಟಿಲರಿಯು ನಂಜನಗೂಡಿನ ಬಳಿ ಸ್ಥಾಪನೆಯಾಗಿದ್ದು, ಕಾರ್ಬಿಯನ್ನು ಉಪಯೋಗಿಸಿ, ದಿನಂಪ್ರತಿ ೩೦,೦೦೦ ಲೀಟರ್ ಮದ್ಯಸಾರವನ್ನು ತಯಾರಿಸುವ ಸಾಮರ್ಥ್ಯವನ್ನು ಹೊಂದಿದೆ. ಉದ್ದಿಮೆಯು ದಿನಂಪ್ರತಿ ೪೫೦ ಘನ ಮೀಟರ್ ಕಲುಷಿತ ನೀರನ್ನು ವಿಸರ್ಜಿಸುತ್ತಿದೆ.

ಉದ್ದಿಮೆಯು ತನ್ನ ಕಲುಷಿತ ನೀರನ್ನು ಶುದ್ಧೀಕರಿಸಲು ಮಾಲಿನ್ಯ ನಿಯಂತ್ರಣ ಮಂಡಳಿ ಅಂಗೀಕರಿಸಿದ ಸಂಸ್ಕರಣ ಘಟಕಗಳನ್ನು ನಿರ್ಮಿಸಿದ್ದು, ಶುದ್ಧೀಕರಿಸಲ್ಪಟ್ಟ ನೀರನ್ನು ವ್ಯವಸಾಯಕ್ಕೆ ಉಪಯೋಗಿಸುತ್ತಿದೆ. ಆದರೆ ಶುದ್ಧೀಕರಿಸಲ್ಪಟ್ಟು ವಿಸರ್ಜಿತವಾಗುತ್ತಿರುವ ನೀರು ಮಂಡಲಿ ನಿಗದಿ ಪಡಿಸಿರುವ ಗುಣಮಟ್ಟಕ್ಕೆ ಸರಿಹೊಂದುತ್ತಿಲ್ಲವಾದ್ದರಿಂದ ಈ ಪ್ರದೇಶದಲ್ಲಿ ಅಂತರ್ಜಲ ಮಾಲಿನ್ಯಗೊಂಡಿದೆ. ಆದುದರಿಂದ ಮಂಡಲಿಯು ಈ ಉದ್ದಿಮೆಗೆ ತನ್ನ ಸಮ್ಮತಿ ಪತ್ರವನ್ನು ನಿರಾಕರಿಸಿದೆ.

ಏಪ್ರಿಲ್ ೧೯೮೮ರಲ್ಲಿ ಈ ಉದ್ದಿಮೆಯ ಸಮೀಪದಲ್ಲಿರುವ ಶಾಂಭವಿ ಕೋಳಿ ಸಾಗಾಣಿಕೆ ಕೇಂದ್ರದ ಮಾಲೀಕರು ತಮ್ಮ ಕೊಳವೆ ಬಾವಿಯ ನೀರು ಕಲುಷಿತವಾಗಿದ್ದು ಅವರ ಉದ್ದಿಮೆಗೆ ತೊಂದರೆಯಾಗಿದೆ ಎಂದು ಮಂಡಲಿಗೆ ದೂರು ಸಲ್ಲಿಸಿದ್ದರು. ಈ ಹಿನ್ನೆಲೆಯಲ್ಲಿ ಆ ಪ್ರದೇಶದ ಕೊಳವೆ ಬಾವಿಗಳ ನೀರನ್ನು ಪರೀಕ್ಷಿಸಲಾಗಿ ಮಲಿನಗೊಂಡಿರುವುದು ದೃಢಪಟ್ಟಿದೆ.

ಅಂತರ್ಜಲದ ಮಾಲಿನ್ಯತೆಯನ್ನು ತಡೆಯಲು ಉದ್ದಿಮೆಗೆ ವಿಥೇನ್ ಅನಿಲ ಉತ್ಪಾದನಾ ತಾಂತ್ರಿಕತೆಯನ್ನು ಅಳವಡಿಸಿ ಮಾಲಿನ್ಯವನ್ನು ಹತೋಟಿಯಲ್ಲಿಡಲು ಆದೇಶ ನೀಡಿದೆ. ಈ ಆದೇಶವನ್ನು ಪಾಲನೆ ಮಾಡದಿರುವುದರಿಂದ ತಾರೀಖು. ೮-೧೧-೮೯ ರಂದು ಮಂಡಲಿಯು ಜಲ (ಮಾಲಿನ್ಯ ಮತ್ತು ನಿಯಂತ್ರಣ)ಕಾಯ್ದೆಯಡಿಯಲ್ಲಿ ನಂಜನಗೂಡಿನ ನ್ಯಾಯಾಲಯದಲ್ಲಿ ಉದ್ದಿಮೆಯ ವಿರುದ್ಧ ಮೊಕದ್ದಮೆ ಹೂಡಿದೆ ಉದ್ದಿಮೆಯು ಉಚ್ಚ ನ್ಯಾಯಾಲಯದಲ್ಲಿ ಇದನ್ನು ಪ್ರಶ್ನಿಸಿ ರಿಟ್ ಹಾಕಲಾಗಿ ಉಚ್ಚ ನ್ಯಾಯಾಲಯವು ೧೬-೨-೯೦ ರಂದು ನಂಜನಗೂಡಿನ ನ್ಯಾಯಾಲಯದಲ್ಲಿ ಹೂಡಿದ ಮೊಕದ್ದಮೆಗೆ ತಡೆಯಾಜ್ಞೆ ನೀಡಿ ಉದ್ದಿಮೆಗೆ ಮಂಡಲಿಯು ವಿಧಿಸಿರುವ ಶರತ್ತುಗಳನ್ನು ೧೬-೫-೯೦ ರೊಳಗೆ ಪಾಲಿಸಲು ಆದೇಶಿಸಿದೆ.

೧೮-೫-೯೦ ರಂದು ಮಂಡಲಿಯು ಉದ್ದಿಮೆಯ ಪರಿವೀಕ್ಷಣೆ ಮಾಡಿ ಉಚ್ಚ ನ್ಯಾಯಾಲಯದ ಆದೇಶವನ್ನು ಪಾಲಿಸದಿರುವುದನ್ನು ಗಮನಿಸಿ ಉದ್ದಿಮೆ ವಿಸರ್ಜಿಸುತ್ತಿರುವ ಕಲುಷಿತ ನೀರಿನ ಮಾದರಿಯನ್ನು ಆ ಪ್ರಾಂತ್ಯದ ಕೊಳವೆ ಬಾವಿಗಳ ನೀರಿನ ಮಾದರಿಗಳನ್ನು ಜಲ ಕಾಯ್ದೆಯ ರೀತ್ಯಾ ವಿಶ್ಲೇಷಣೆಗೆ ಒಳಪಡಿಸಿದೆ. ಆ ವರದಿಯ ಪ್ರಕಾರ ಉದ್ದಿಮೆ ವಿಸರ್ಜಿಸುತ್ತಿರುವ ಕಲುಷಿತ ನೀರು ಮತ್ತು ಕೊಳವೆ ಬಾವಿಗಳ ನೀರು ನಿಗದಿಪಡಿಸಿದ ಗುಣಮಟ್ಟವನ್ನು ಮೀರಿದ್ದು ಈ ಬಾವಿಗಳ ನೀರು ಕೆಡುವುದಕ್ಕೆ ಉದ್ದಿಮೆ ವಿಸರ್ಜಿಸುತ್ತಿರುವ ಕಲುಷಿತ ನೀರೇ ಕಾರಣವೆಂದು ಸಾಬೀತಾಗಿದೆ.